ಯಕ್ಷಗಾನಾಂಬೆಯ ಸ್ತುತಿಪದ್ಯ

(ಗುಣಿತಾಕ್ಷರಿ ಪ್ರಭೇದದ ಚಿತ್ರಕಾವ್ಯ)

॥ ವಾರ್ಧಕ ಷಟ್ಪದಿ ॥

ಕಲೆ ಯಕ್ಷಗಾನಾಂಬೆ ಕಾಲ-ಲಯ-ತಾಳನುತೆ
ಕಿಲಿಬಿಷವಿದೂರೆ ಕಿಟಧಿಮಿಯೆಂದು ಕೀರ್ತಿಸುವೆ
ಕುಲವರದೆ ಕುಮುದಾಕ್ಷಿ ಕೂರ್ಮೆಯಿಂದಲಿ ನೋಡು
ಕೃಪೆಯಿಟ್ಟು ಕಲಿಸು ಮಾತೇ ॥
ಕೆಲದೊಳಿರು ಕೇಳಮ್ಮ ಕೈ ಹಿಡಿದು ನಡೆಸಮ್ಮ
ಕೊಲಬೇಡ, ಕೋಟಲೆಯ ಕೊಡಬೇಡ ರಂಗ ಕೌ-
ಶಲಸಿದ್ಧಿ ಕರುಣಿಸೌ ಕಂಬುಚಕ್ರಗದಾಬ್ಜೆ
ಕಸ್ತೂರಿಕಾ ಭೂಷಿತೇ ॥ 1 ॥

* * *

॥ ತುಜಾವಂತು - ಝಂಪೆ ॥

ಪರಕೀಯ ನೆಲದಿ ನಾದದ ವರ್ಷ ಸುರಿಸುವೀ
ಧರೆಗತ್ಯಧಿಕಮನೋರಮೆ ಯಕ್ಷಕಲೆಯ-
ಕ್ಷರಶಾಸ್ತ್ರಕಳುತಲೀ ಗಾನ ನಾಟ್ಯವಿಧಾನ
ಸರಿದಾರಿಗೆಳಸೆ ಕಾಮಿಪ ಸೂಕ್ತ ಸಮಿತಿ ॥ 1 ॥

(ಆಶುಕಾವ್ಯ ನಿರ್ಮಿತಿ: ಡಾ। ಕಬ್ಬಿನಾಲೆ ವಸಂತ ಭಾರದ್ವಾಜ
ದಿನಾಂಕ 3-10-1998, ಮುಂಬಯಿ)

ಎ. ರಾಮನಾಯಕ ಸಂಸ್ಮರಣ
ಪ್ರಸಂಗ ಮಾಲಿಕೆ
ಸಂಪುಟ-23



ಪ್ರಕಾಶಕರು
ಎಚ್.ಬಿ.ಎಲ್.ರಾವ್
ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ
2002

Scanned by CamScanner

ಎ. ರಾಮನಾಯಕ ಜನ್ಮಶತಾಬ್ದ ಸಂಸ್ಮರಣ

ಯಕ್ಷಗಾನ ಪ್ರಸಂಗಮಾಲಿಕೆ

ಸಂಪುಟ – 23

(ಆರು ಪ್ರಸಂಗಗಳು)

ಸಂಪಾದಕರು : ಎಚ್. ಬಿ. ಎಲ್. ರಾವ್
ಸಹಕಾರ : ಪಿ. ಶ್ರೀನಿವಾಸ ಭಟ್, ಕಟೀಲು

K.G. Lakshminarayana
7-5-2003

ಪ್ರಕಾಶನ
ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ
2002

Scanned by CamScanner

Six Yakshagana Prasangas written by Jr. Balipa Narayana Bhagavat and Hosabettu Bhaskar Salian. Edited by H.B.L. Rao, Mumbai.

First Impression : 2002
Volume : 23
Pages : vi + 106
Price : Rs. 50/-

ಮುಖಪುಟ ವಿನ್ಯಾಸ : ನಾಗರಾಜ ಆಚಾರ್ಯ, ಮಣಿಪಾಲ.
ಅಕ್ಷರಸಂಯೋಜನೆ : ಶ್ರೀಮತಿ ಸ್ವರ್ಣಲತಾ ಕೇಕುಣ್ಣಾಯ,
'ನವದುರ್ಗಾ ಲೇಸರ್‌ಟೆಕ್',
ಕುಂಜಿಬೆಟ್ಟು, ಉಡುಪಿ–576 102.

Printed at : Manipal Press Ltd., Manipal-576 119.
Publisher : Padaveedhara Yakshagana Samiti,
Manushruti, C.42/2/2, Sector-29
Vashi, Navi Mumbai-400 703.

ಸಂಪಾದಕೀಯ

ಎ. ರಾಮ ನಾಯಕರ ಜನ್ಮಶತಾಬ್ದ(೧೯೦೨–೨೦೦೨)ವನ್ನು ಅವರ ಪರಿವಾರ ಮತ್ತು ಮುಂಬಯಿಯ ಅಭಿಮಾನಿವರ್ಗದವರು ವರ್ಷವಿಡೀ ಆಚರಿಸುತ್ತಿರುವ ಸಂದರ್ಭ, ಹತ್ತನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದಲ್ಲಿ ಆರು ಯಕ್ಷಗಾನ ಪ್ರಸಂಗಗಳಿಂದ ಕೂಡಿದ, ಇಪ್ಪತ್ತಮೂರನೆಯ ಸಂಪುಟವನ್ನು ಅವರ ಪುತ್ರರ ಸಹಕಾರದಿಂದ 'ಎ. ರಾಮ ನಾಯಕ ಸಂಸ್ಮರಣಾ ಯಕ್ಷಗಾನ ಪ್ರಸಂಗ ಮಾಲಿಕೆ'ಯಾಗಿ, ಯಕ್ಷಗಾನ ಕಲಾಮಾತೆಗೆ, ಮಂಗಳೂರು ಮಲ್ಲಿಗೆಯ ಹಾರದಂತೆ ಸಮರ್ಪಿಸಲು ಮಹದಾನಂದವಾಗುತ್ತಿದೆ. ಈ ಸತ್ಕಾರ್ಯಕ್ಕೆ ಸಹಕರಿಸಿದ ರಾಮ ನಾಯಕರ ಪುತ್ರ ಸತೀಶ ನಾಯಕರಿಗೆ ನಾನು ಋಣಿಯಾಗಿದ್ದೇನೆ.

೨-೫-೧೯೦೨ರಲ್ಲಿ ಜನಿಸಿದ್ದ ಎಕ್ಕಾರು ರಾಮ ನಾಯಕರು ಬಡತನದಿಂದ ಜೀವನವನ್ನು ಆರಂಭಿಸಿ ಪ್ರಾಮಾಣಿಕತೆ ಮತ್ತು ಪರಿಶ್ರಮಗಳ ಮೂಲಕ ಹಂತ ಹಂತವಾಗಿ ಮೇಲೇರುತ್ತಾ ೧೯೪೨ರಲ್ಲಿ ಉಡುಪಿ ಶ್ರೀಕೃಷ್ಣ ಬೋರ್ಡಿಂಗ್‌ನ್ನು ಸ್ಥಾಪಿಸಿ, ಮುಂಬಯಿಯಲ್ಲಿ ಉಡುಪಿ ಹೋಟೆಲ್ ಜನಕರೆಂಬ ಕೀರ್ತಿಭಾಜನರಾದರು. ಉದ್ಯಮದಲ್ಲಿ ಅಭಿವೃದ್ಧಿ ಹೊಂದಿದ ರಾಮ ನಾಯಕರು ಧಾರ್ಮಿಕ, ಸಾಮಾಜಿಕ ಮತ್ತು ಯಕ್ಷಗಾನ ಕ್ಷೇತ್ರಗಳನ್ನು ತ್ರಿಕರಣಪೂರ್ವಕವಾಗಿ ಬೆಂಬಲಿಸಿದರು. ೧೯೫೬ರಲ್ಲಿ ಹುಟ್ಟಿದ ಗೌಡಸಾರಸ್ವತ ಬ್ರಾಹ್ಮಣ ಯಕ್ಷಗಾನ ಮಂಡಳಿಯು ೧೯–೪–೧೯೫೮ರಲ್ಲಿ ಜನಪ್ರಿಯ ಯಕ್ಷಗಾನ ಮಂಡಳಿಯಾಗಿ ಜನಪ್ರಿಯವಾಗಲು ಕಾರಣವಾದ ಮಂಡಳಿಯ ಸಂಸ್ಥಾಪಕ ಮತ್ತು ಪೋಷಕರಲ್ಲಿ ರಾಮ ನಾಯಕರದ್ದು ಮಹತ್ವದ ಪಾತ್ರ. ಎಪ್ರಿಲ್, ೧೯೮೦ರಲ್ಲಿ ನಡೆದ ಜನಪ್ರಿಯ ಮಂಡಳಿಯ ಬಯಲಾಟದಲ್ಲಿ ಮುಖಕ್ಕೆ ಬಣ್ಣ ಬಳಿದು ಉತ್ಸಾಹದಿಂದ ಕುಳಿತಿದ್ದ ರಾಮ ನಾಯಕರಿಗೆ ವಸ್ತ್ರಾಲಂಕಾರವನ್ನು ಮಾಡುವ ಸುಯೋಗ ನನ್ನ ಪಾಲಿಗೆ ಬಂದಿತ್ತು. ದಿನಾಂಕ ೩೦–೩–೧೯೮೧ರಲ್ಲಿ ರಾಮ ನಾಯಕರು ಕೀರ್ತಿಶೇಷರಾದರೂ ಅವರ ಸುಪುತ್ರರು ದಿವಂಗತ ಡಾ। ಹರೀಶ್ ನಾಯಕ ಮೆಮೋರಿಯಲ್ ಟ್ರಸ್ಟಿನ ಮೂಲಕ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಶತಾಬ್ದದ(೨೦೦೨) ಸಂದರ್ಭದಲ್ಲಿ ಹಮ್ಮಿಕೊಂಡಿರುವುದು ಶ್ಲಾಘನೀಯ. ಈ ಸ್ತುತ್ಯ ಕಾರ್ಯಗಳಲ್ಲಿ ರಾಮ ನಾಯಕರಿಗೆ ಪ್ರಿಯವಾದ ಯಕ್ಷಗಾನ ಪ್ರಸಂಗಗಳ ಮುದ್ರಣ ಮತ್ತು ಪ್ರಕಾಶನದ ಕೆಲಸವೂ ಸೇರಿದೆ.

ಯಕ್ಷಗಾನ ಪ್ರಸಂಗಗಳನ್ನು ಬರೆದು ಮತ್ತು ಸಂಗ್ರಹಿಸಿಕೊಟ್ಟ ಆತ್ಮೀಯರಾದ ಕಿರಿಯ ಬಲಿಪ ನಾರಾಯಣ ಭಾಗವತರು ಮತ್ತು ಶ್ರೀ ಪಿ. ಶ್ರೀನಿವಾಸ ಭಟ್, ಅಕ್ಷರ ಸಂಯೋಜನೆಯನ್ನು ಮಾಡಿದ 'ನವದುರ್ಗಾ ಲೇಸರ್‌ಟೆಕ್'ನ ಡಾ। ಪದ್ಮನಾಭ ಕೇಕುಣ್ಣಾಯ, ನಗೆಮುಖದ ಸೋದರಿ ಸ್ವರ್ಣಲತಾ ಕೇಕುಣ್ಣಾಯ, ಆಗುವುದಿಲ್ಲವೆಂದು ಹೇಳಲು ತಿಳಿಯದ ಲಕ್ಷ್ಮೀನಾರಾಯಣ

Scanned by CamScanner

ಕುಂಡಂತಾಯ, ಮುದ್ರಣ ವೆಚ್ಚವನ್ನು ಕನಿಷ್ಠಮಟ್ಟಕ್ಕೆ ತಂದಿರಿಸಿದ ವಾಸುದೇವ ರಾಯರು, ಸಿಟ್ಟಿಗೇಳದ ರತ್ನಾಕರ ರಾಯರು ಮುದ್ರಣದ ಯಶಸ್ಸಿಗೆ ಕಾರಣರಾಗಿದ್ದಾರೆ. ಅವರಿಗೆ ನನ್ನ ಹಾರ್ದಿಕ ನಮನಗಳು. ಗೃಹಕೃತ್ಯಗಳ ಕಡೆಗೆ ಲಕ್ಷ್ಯ ಕೊಡದ ನನ್ನನ್ನು ಸಹಿಸುವ ಮನೆಯವರಿಗೆ, ನಿತ್ಯ ಬ್ರಾಹ್ಮಣನಂತೆ, ನೆನೆಸಿದಾಗ ಊರಿಗೆ ಬಂದು ಹೋಗುತ್ತಿರುವ ನನಗೆ ಆತಿಥ್ಯವನ್ನು ನೀಡುತ್ತಿರುವ ಅತ್ತಿಗೆ ಮತ್ತು ಮೋಹನರಾಯರು ಶಕ್ತಿಮೀರಿ ಸಹಕರಿಸಿದ್ದಾರೆ. ಅವರೆಲ್ಲರಿಗೂ ನಾನು ಋಣಿ. ಆಕರ್ಷಕ ಮುಖಪುಟ ವಿನ್ಯಾಸಕ ನಾಗರಾಜ ಆಚಾರ್ಯರು ಮತ್ತು ಸುಂದರ ಮುದ್ರಣಕ್ಕೆ ಹೆಸರಾದ ಮಣಿಪಾಲ್ ಪ್ರೆಸ್ ಲಿಮಿಟೆಡ್‌ನ ಎಲ್ಲರಿಗೂ ನನ್ನ ವಂದನೆಗಳು.

ಈವರೆಗೆ ಹಸ್ತಪ್ರತಿಯಲ್ಲಿದ್ದ ನೂರ ಇಪ್ಪತ್ತು ಪ್ರಸಂಗಗಳು ಬೆಳಕಿಗೆ ಬಂದಿವೆ. ಉತ್ತಮ ಪ್ರಸಂಗಗಳು ಇನ್ನೂ ಹಸ್ತಪ್ರತಿಯಾಗಿ ಉಳಿದಿವೆ. ಅವುಗಳ ಮುದ್ರಣಕ್ಕೆ ಕಲಾಭಿಮಾನಿಗಳಿಂದ ಆರ್ಥಿಕ ಸಹಕಾರ ದೊರೆಯಬಹುದೆಂಬ ಭರವಸೆಯಿಂದ ಹತ್ತನೆಯ ಸಮ್ಮೇಳನಕ್ಕೆ ಮಂಗಳ ಹಾಡಿ ಹನ್ನೊಂದನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಶುಭ ಪ್ರತೀಕ್ಷೆಯೊಂದಿಗೆ ವಿರಮಿಸುವ

ಭವದೀಯ
ಎಚ್. ಬಿ. ಎಲ್. ರಾವ್
ಪದವೀಧರ ಯಕ್ಷಗಾನ ಸಮಿತಿ
ಮುಂಬಯಿ



ಯಕ್ಷಗಾನ ಕಲಾಪೋಷಕ
ದಿ। ಎ. ರಾಮ ನಾಯಕ

Scanned by CamScanner

ಶ್ರೀಮನ್ಮಹಾಭಾರತದೊಳಗಣ

ಏಕಲವ್ಯನ ಗುರುಭಕ್ತಿ

ಪ್ರಸಂಗಕರ್ತರು

ಬಲಿಪ ನಾರಾಯಣ ಭಾಗವತ

Scanned by CamScanner

ಪಾತ್ರವರ್ಗ

- ಏಕಲವ್ಯ
- ದ್ರೋಣ
- ಕೌರವ
- ದುಶ್ಶಾಸನ
- ಧರ್ಮರಾಯ
- ಭೀಮ
- ಅರ್ಜುನ
- ನಕುಲ
- ಸಹದೇವ
- ಕೌರವಾದಿಗಳು, ಪರಿವಾರದವರು, ನಾಯಿಗಳು.

॥ ಶ್ರೀದುರ್ಗಾಪರಮೇಶ್ವರೀ ಪ್ರಸನ್ನಾ ॥

ಯಕ್ಷಗಾನ

ಏಕಲವ್ಯನ ಗುರುಭಕ್ತಿ

॥ ಶಾರ್ದೂಲವಿಕ್ರೀಡಿತ ॥

ಸ್ಕಂದಂ ಷಣ್ಮುಖ ತಾರಕಾದಿಮಥನಂ ಸಂಪ್ರೀತ ಗೌರೀಸುತಮ್ ।
ಇಂದ್ರಾದ್ಯಾಮರವೃಂದರಕ್ಷಗುಹ ಕಾರ್ತಿಕೇಯನೀಶೋದ್ಭವಮ್ ॥
ಗಂಧಂ ಚಂದನಲೇಪಿತಂ ಶಿಖಿರಥಂ ಸೇನಾನಿ ಲೋಕೇಶ್ವರಮ್ ।
ಚಂದ್ರದ್ರೂಪಿ ಕುಮಾರಕಂ ಉರಗರೂಪಂ ವಿಪ್ರದೇವಂ ಭಜೇ ॥ ೧ ॥

॥ ನಾಟಿ- ರೂಪಕ ॥

ಜಯ ಮೂಲಪುರುಷ ಜಯಜಯ । ಜಯಮಾಯಾ ಮಹಿಮ ॥ ಪ ॥ ಶ್ರೀಲಕ್ಷ್ಮೀಧವದೇವನೆ । ಪಾಲಾಂಬುಧಿಯ ನಿವಾಸನೆ ॥ ವ್ಯಾಳಶಯನ ಖಳನಾಶನೆ । ಕಾಲಾಂತಕ ಸಖನೆ ॥ ಜಯ ॥ ೧ ॥ ಸನಕಸ ನಾರದವಂದಿತ । ಮುನಿಜನರಾತ್ಮ ವಿರಾಜಿತ ॥ ವನಜಾಸನ ಕಾಮನ ಪಿತ । ಗುಣನಿಧಿ ಸುರವಿನುತ ॥ ಜಯ ॥ ೨ ॥ ಸಿಂಧೂರವರದ ಧ್ರುವನೆಳೆ । ಕಂದಗೆ ಸುಸ್ಥಿರದಾನೆಲೆ । ಹೊಂದಿಸಿಹನೆ ಪಾಲಿಸು ಸತಿ । ಕುಂದದೆ ಮನಸಿನೊಳೆ ॥ ಜಯ ॥ ೩ ॥ ಶಂಖಚಕ್ರಗದೆಪದ್ಮಾ । ಲಂಕೃತ ಪಂಕರುಹಾಕ್ಷನೆ ॥ ಓಂಕಾರಾಶ್ರಿತ ಭಜಕರ । ಸಂಕುಲ ಪಾಲಕನೆ ॥ ಜಯ ॥ ೪ ॥

॥ ವಾರ್ಧಿಕ್ಯ ॥

ಲಂಬೋದರನ ನುತಿಸಿ ಶಂಭು ವಾಣೀಶರಂ । ಸಂಭ್ರಮದಿ ಧ್ಯಾನಿಸುತ ನಂಬಿ ಗುರುಹಿರಿಯರಂ । ಜಂಭಾರಿ ದಿಕ್ಪತಿ ಕದಂಬ ಕವಿಗಳ ನೆನೆವುತಂ ಬೇಡಿ ಸಿರಿ ಗೌರಿಯ ॥ ಕುಂಭಿನಿಯ ಶಾರದೆಯಳಂ ಬಾಗುತಲಿ ಸ್ಮರಿಸಿ । ಅಂಬುಧಿಯ ತೆರದಿ ವ್ಯಾಸಂ ಬರೆದ ಭಾರತದೊಳುಂ ವ್ಯಾಧಪತಿಯಾದಗಂ ಬಾಲ್ಯದೊಳ್ ಶ್ರದ್ಧೆಯುಂ ಭಕ್ತಿಯಿಂದಾತನು ॥ ೧ ॥

॥ ಭಾಮಿನಿ ॥

ಏಕಲವ್ಯಾಖ್ಯೆಯಲಿ ವಿದ್ಯೆಯ । ತಾ ಕಲಿತು ಮೆರೆದಿರ್ಪ ಕಥೆಯನು । ಲೋಕಕರಿವೋಲೆಕ್ಷಗಾನಂ ರಚಿಪೆನಾನಿದರ ॥ ವಾಕ್ಸರಣಿ ಗಣಪ್ರಾಸ ಯತಿಗಳ । ನೇಕ ಲಕ್ಷಣವರಿಯೆನೊಂದನು । ಈ ಕೃತಿಯನೋದುತ್ತ ಮನ್ನಿಸಿರೆನ್ನ ಪ್ರಾರ್ಥಿಪೆನು ॥ ೧ ॥

Scanned by CamScanner

॥ ಸೌರಾಷ್ಟ್ರ- ತ್ರಿವುಡೆ ॥

ಧಾರಿಣಿಪ ಕೇಳಿತ್ತ ಮಹ ಕಾಂ । ತಾರದೊಳಗೆ ಹಿರಣ್ಯಧನು ಸುಕು । ಮಾರ ವ್ಯಾಧನು ಏಕಲವ್ಯನು । ದಾರತೆಯಲಿ ॥ ೧ ॥ ಶಸ್ತ್ರವಿದ್ಯೆಯನರಿತು ಲೋಕದಿ । ಕೀರ್ತಿ ಗಳಿಸಲು ಬಯಸಿ ಕಲಿಸುವ । ಯುಕ್ತ ಗುರುವ್ಯಾರೆಂದು ತಿಳಿದನು । ಚಿತ್ತದೊಳಗೆ ॥ ೨ ॥

॥ ವಾರ್ಧಿಕ ॥

ಹಸ್ತಿನಾವತಿಯೊಳಗೆ ದ್ರೋಣನೆಂಬಾ ವಿಪ್ರ । ಶಸ್ತ್ರವಿದ್ಯೆಯ ಕುರುಕುಲದ ಬಾಲರಿಂಗೆ ಕಲಿ । ಸುತ್ತಿರ್ಪ ಭೀಷ್ಮನಾಣತಿಯಂತೆ ನಾ ಪೋಗಿ ಕುಲಹೀನನಾದಡ ವನ ॥ ಭಕ್ತಿಯಿಂದೊಲಿಸುತ್ತ ಸಕಲ ಯುದ್ಧ ಸುವಿದ್ಯೆ । ಅರ್ತಿಯಲಿ ಪಡ ಕೊಂಬೆನೆಂಬಾಶೆಯಲಿ ಪೊರಟು । ಉತ್ತರಿಸಿ ಮಾರ್ಗಮಂ ಕುಂಭಜನ ಸಮಯಮಂ ತಿಳಿದೆರಗಿ ನುತಿಸುತೆಂದ ॥ ೧ ॥

॥ ಸುರುಟಿ- ಏಕ ॥

ಗುರುವರ ಜಯ ಜಯತು । ಬಾಲನ । ಕರುಣದಿ ಸಲಹಿನಿತು ॥ ಪರಮಾಚಾರ್ಯನೆ ಸುರಗೀಪ್ಪತಿಗೆಣೆ । ಚರಣ ಶರಣನನು ತೊರೆಯದೆ ಮನ್ನಿಸು ॥ ೧ ॥ ವಂದಿಪೆ ಕೋಲಗುರು । ವಿಪ್ರರ । ಸಂದಣಿಗಾಲ ತರು ॥ ಮಂದಬುದ್ಧಿಯಾಗಿಂದಿಹನೆನ್ನನು । ಕಂದನೆಂದೆಣ್ಣಿಸಿ ಮುಂದಕುದ್ಧರಿಸೈ ॥ ೨ ॥

॥ ಕಂದ ॥

ನುತಿಸುತ್ತಡಿದಾವರೆಯೊಳ್ । ಗತಿ ನೀನೆನುತಲಿ ಪ್ರಣಾಮವಂ ಗೈದಾಗಂ ॥ ಮತಿಯುತ ದ್ರೋಣಂ ಕಾಣುತ । ಲತಿಯಾಶ್ಚರ್ಯದಿ ಕುಮಾರನೇಳೆನುತೆಂದಂ ॥ ೧ ॥

॥ ಕೇತಾರಗೌಳ- ಝಂಪೆ ॥

ಕಂದ ನೀನಾವ ಕುಲಜ । ಮಮ ಪಾದ । ದ್ವಂದ್ವಕೆರಗಿರುವೆ ಸಹಜ ॥ ಬಂದುದೇಕೆನ್ನ ಬಳಿಗೆ । ಪೇಳ್ಮನದ । ಸಂದೇಹಗಳನು ಎನಗೆ ॥ ೧ ॥ ಪೆಸರೇನು ಊರದೆಲ್ಲಿ । ಪಡೆದವರ । ನುಸುರು ಸಂತೋಷದಲ್ಲಿ ॥ ಪೊಸ ಹುಡುಗರಂತಿರ್ಪೆಯ । ಎನಲಾಗ । ಬೆಸಸಿದನು ಬಂದ ಬಗೆಯ ॥ ೨ ॥

॥ ಪಂತುವರಾಳಿ- ರೂಪಕ ॥

ರುದ್ರ ಸಮ ಪ್ರಬುದ್ಧ ಗುರುವರ । ಚರಣಾಬ್ಜಗಳಲಿ । ಬಿದ್ದು ನುಡಿವೆ ಶುದ್ಧ ಮನದಿರ ॥ ಉದ್ಧತ ನಿಷಾಧರಿಂಗೆ । ಎದ್ದು ತೋರ್ಪ ಹೇಮಧನುಗೆ । ಮುದ್ದುಸುತ ನಾನೇಕಲವ್ಯ । ಯುದ್ಧದಿ ಸವ್ಯಾಪಸವ್ಯ ॥ ೧ ॥ ಬಿಲ್ಲುವಿದ್ಯೆಯೆಲ್ಲ ಅಲ್ಲದೆ । ಮಂತ್ರಾಸ್ತ್ರಕೈದು । ವಲ್ಲಿ ಸಮರದಲ್ಲಿ ಗೆಲ್ವಡೆ ॥ ಉಳ್ಳ ಮೂಲ ತತ್ವ

ತಿಳುಹಿ । ಬಲ್ಲಿದನಪ್ಪಂತೆ ಹರಸಿ । ಒಳ್ಳಿತು ಮಾಡೆನ್ನನೆನಲು । ಸೊಲ್ಲಿಸಿದ ಕುಂಭಜನವನೊಳು ॥ ೨ ॥

॥ ಸಾರಂಗ- ಅಷ್ಟ ॥

ವ್ಯಾಧಕುಮಾರ ನಿನ್ನ । ಮಾತುಗಳೆಲ್ಲ । ಸ್ವಾದುವು ಸುಗುಣರನ್ನ ॥ ಆದಡೀ ಮಠದಲ್ಲಿ ಬೋಧಿಪ ವಿದ್ಯೆಯು । ಮೇದಿನಿಪರ ವಂಶಕಾದುದಲ್ಲದೆ ಬೇರೆ ॥ ೧ ॥

ಕೀಳು ಕುಲದವರಿಗೆ । ಧನುರ್ವೇದ । ಪೇಳ್ದರಧರ್ಮವಾಗಿ ॥ ಹೇಳಿಕೊಡುವ ಕಷ್ಟದೂಳಿಗವಾಗಿದೆ । ಕಾಲಕಳೆಯದೆ ನಿನ್ನಾಲಯವನು ಸೇರು ॥ ೨ ॥

॥ ವಾರ್ಧಿಕ್ಯ ॥

ಕುಲಹೀನನೆನುತೆನ್ನ ಹಳಿಯದಿರು ನಮ್ಮವರ । ಹಿರಿಯರೆಂಬುದ ಕೇಳಿ ಬಲ್ಲೆ ಶಶಿವಂಶಜರು । ಬಲು ಹಿಂದೆ ದಾಶಕನ್ನಿಕೆಯಣುಗರಂತೆ ನಿಮ್ಮಯ ಹುಟ್ಟು ತಿಳಿದಿರ್ಪೆನು ॥ ನಲಿವಸುರ ಗಣಿಕೆಯ ಘೃತಾಚಿ ರೂಪಕ್ಕೊಲಿದ । ಸತಿ ಭರದ್ವಾಜನಾ ವೀರ್ಯಸ್ಖಲನದಿಂದ । ಬಳಿಕ ಕುಂಭಜರಾದರಿಂ ವಿಪ್ರರೆನಿಸಿಹನ ಕುಲಶ್ರೇಷ್ಠಮಾಡುದ್ದೈಸೆ ॥ ೧ ॥

॥ ಕಾಂಬೋದಿ- ಝಂಪೆ ॥

ಉಪರಿಚರವಸು ಚಕ್ರವರ್ತಿಯಣುಗೆಯು ದಾಶ । ನೃಪನಿಂಗೆ ಸಾಕು ಮಗಳಾಗೆ ॥ ಗುಪಿತವೇನಿಲ್ಲ ತಂದಿಲ್ಲಿ ವಿಧಿ ವಿಹಿತದಿಂ । ದಪವಿತ್ರರೇ ಹುಟ್ಟಿದವರು ॥ ೧ ॥ ದೇವಗುರು ಗೀಷ್ಪತಿ ಉಚಥ್ಯನರಸಿಯಳಾದ । ಲಾವಣ್ಯಯುತೆ ಮಮತೆಯಳನು ॥ ಭಾವಜಾಸ್ತ್ರದಿ ಕೂಡಿ ಪುಟ್ಟಿದಣುಗನ ಬಿಡದೆ । ಈರ್ವರೇ ಸಾಕಿದುದರಿಂದ ॥ ೨ ॥ ಭರಿಸಿ ಭರನಾದ ಈರ್ವರ ಮಗನು ದ್ವಿಜನಾಗೆ । ಧರೆಗೆ ಭರದ್ವಾಜನೆಂದಾದ ॥ ಸುರ ಸತಿ ಘೃತಾಚಿಯಳ ದರುಶನದಿ ತದ್ವೀರ್ಯ । ಭರದಿ ಪತನವದಾಗೆ ತಿಳಿದು ॥ ೩ ॥ ದೊನ್ನೆಯಲಿ ಪೋಷಿಸಲು ದ್ರೋಣನಾಗಿಹೆ ನಾನು । ಅಗ್ನಿವೇಶ್ಯನ ಶಿಷ್ಯನಾಗಿ ॥ ಮನ್ನಣೆಯ ಪಡೆದಿರ್ಪೆ ಗಣ್ಯ ಬ್ರಾಹ್ಮಣರಿಂದ । ಜನ್ಮಾಂಧ ನೀನೇನ ಬಲ್ಲೆ ॥ ೪ ॥

॥ ಸಾಂಗತ್ಯ- ರೂಪಕ ॥

ನಿಪುಣರಹುದು ನೀವು ವಿಪರೀತವೆಣಿಸದೆ । ಕುಪಿತನಾಗದೆ ಕೇಳು ಮಾತ ॥ ಕೃಪನು ಗಣಿಕೆ ಪುತ್ರ ವಿಪ್ರನೆಂತಾಗಿ ಶೋ । ಭಿಪನಿಲ್ಲಿಹುದು ನೀತಿಯಹುದೆ ॥ ೧ ॥ ಕೇಳವಿಚಾರಿ ಸಮರ್ಥ ಕೃಪಾಚಾರ್ಯ । ಶೀಲ ಗೌತಮನ ವಂಶಜನು ॥ ಮೇಲಾಗಿ ಶರದ್ವಂತ ಮುನಿಗೆ ದೇವಾಂಗನೆ । ಜಾಲವತ್ಯೆಂಬ ಅಪ್ಸರೆಯ ॥ ೨ ॥ ದರುಶನವಾಗಲಾ ಶರಸ್ತಂಭದಲ್ಲಿ ಮುಂ । ದ್ವರಿದು ರೇತಸ್ಸು ಸ್ರವಿಸಲು ॥ ತರಳನಾದನು ಕೃಪ ತರಳೆಯು ಕೃಪಿಯಾಗೆ । ಕರೆದೊಯ್ದು ಪೊರೆದ ಮಕ್ಕಳನು

Scanned by CamScanner

॥ ೩ ॥ ಸರ್ವವನರಿತವ ಶಂತನುವನು ಸೇರಿ । ಇರ್ವನಾಶ್ರಯದಲ್ಲಿ ಮೊದಲೆ ॥ ಪಾರ್ವರ ಕುಲ ಚಂದ್ರವಂಶಕೆ ಕೊರತೆಯೆ । ಲ್ಲಿರ್ವುದು ಶಾಸ್ತ್ರ ಸಮ್ಮತದಿ ॥ ೪ ॥

॥ ಕಂದ ॥

ವರ್ಣದಿ ಮೇಲಾಗಿಹ ಬುಧ । ವರ್ಣಿಯ ಗುರುವೆ ತಿರಸ್ಕರಿಸದೆನ್ನುವನುಂ ॥ ಎಣ್ಣಿಸದೆನ್ನಯ ತಪ್ಪಂ । ಮನ್ನಿಸಿ ವಿದ್ಯೆಯನು ಪೇಳೆನಲ್ ಖತಿಗೊಂಡಂ ॥ ೧ ॥

॥ ಸೌರಾಷ್ಟ್ರ- ತ್ರಿವುಡೆ ॥

ಎಲೆ ಹುಡುಗ ನೀನೇನನೊದರುವೆ । ಕುಲವ ಹಳಿದಿಹ ತಪ್ಪು ಮನ್ನಿಸು । ತೊಲಿದು ವಿದ್ಯೆಯ ಕಲಿಸಬೇಕೇ । ಕುಲವಿಹೀನ ॥ ೧ ॥ ಎಲ್ಲ ಬಲ್ಲಿದ ನಿನಗೆ ತಿಳಿಸಲಿ । ಕಿಲ್ಲಿ ಏನಿದೆ ವಿದ್ಯೆ ಕಲಿಸಲು । ಖುಲ್ಲ ಕೀಳು ನಿಷಾಧ ತೊಲಗೈ । ಬಲ್ಲೆ ನಿಮ್ಮ ॥ ೨ ॥ ಪಾಪಿ ವೇನನ ತೊಡೆ ಮಥಿಸಿ ವನ । ಪ್ರಾಪ್ತಿಯಾಗಿಹರಧಮ ವಂಶಕೆ । ಈ ಪರಿಯ ಧನುರ್ವೇದ ಕಲಿಸಲು । ಭೂಪನಲ್ಲ ॥ ೩ ॥ ಕೆಸರು ಕಮಲಕೆ ಸರಿಯೆ ತುರುಚೆಯೊ । ಲೆಸೆವ ಬಾಲನೆ ನಡೆಯೊ ನುಡಿಯದೆ । ಕುಶಲ ಭಕ್ತಿಗೆ ಫಲಬಹುದು ಎಂ । ದುಸುರಿ ದ್ರೋಣ ॥ ೪ ॥ ಮನದಿ ಖೇದವ ಗೊಳ್ಳದಿರು ಜೀ । ವನದ ಶ್ರಮದಿಂ ಕೀರ್ತಿ ಬಹುದೆಂ । ದೆನಲು ತನ್ನೊಳು ಚಿಂತಿಸಿದ ಕಾ । ನನದ ಪಥದಿ ॥ ೫ ॥

॥ ನೀಲಾಂಬರಿ- ರೂಪಕ ॥

ಹರನೇ ಪುರಹರ ಶಿವ ಶಂ । ಕರನೇ ತೊರೆದನೆ ಗುರುವರ । ಜರೆದಟ್ಟಿದನಾತನ ಮಿಗಿ । ಲಿರುವರೆ ಲೋಕದಲಿ ॥ ಪ ॥ ಶ್ರೇಷ್ಠರ ವಂಶದ ಕುಂದನು । ಭ್ರಷ್ಟರಂ ತೊರೆದಿನಿತಾಯಿತೆ । ಕಷ್ಟವು ಎನಗಾಯಿತು ಜಲ । ಕುಟ್ಟಿ ಕೊಡಹಿದಂತೆ । ಸೃಷ್ಟಿಪಾಲಕರು ಬ್ರಾಹ್ಮಣ । ರೆಷ್ಟಂದರು ಉತ್ತಮರಿರೆ । ನಷ್ಟವು ಎನಗಲ್ಲದೆ ಮತಿ । ಗೆಟ್ಟೆನುಹಾ ವಿಧಿಯೆ ॥ ೧ ॥ ಧೃತಿಗೆಡಲಿನ್ನೇತಕ್ಕೆ ವ । ಸತಿ ಸೇರುತ ಗುರು ದ್ರೋಣನ । ಹಿತದಾಶೀರ್ವಚನದಿ ನಾ । ಪ್ರತಿ ರೂಪವ ಮಾಡಿ ॥ ಸತತವು ವಿದ್ಯೆಯ ಕಲಿವೆನು । ಕ್ಷಿತಿಯಲಿ ಕೀರ್ತಿಯ ಪಡೆವೆನು । ಜತನದೊಳೆನ್ನುತ ಮನೆಗ । ಯ್ದುತಲತಿ ಸಂತಸದಿ ॥ ೨ ॥

॥ ಕಂದ ॥

ಶುಭ ವೇಳೆಯೊಳುಂ ತನ್ನಯ । ವಿಭು ಗುರು ದ್ರೋಣನ ಸುಶಾಂತ ಮೂರ್ತಿಯ ಗೈದುಂ ॥ ಶಬರ ಕುಮಾರಂ ಸ್ಥಾಪಿಸಿ । ಅಭಯವ ಕೊಡು ಎಂದೆನುತ್ತ ಪೂಜಿಸುತೆಂದಂ ॥ ೧ ॥

॥ ಭೈರವಿ- ತ್ರಿವುಡೆ ॥

ಗುರುವರೇಣ್ಯ । ಜಯ ಜಯ । ಗುರುವರೇಣ್ಯ ॥ ಪ ॥ ಗುರುವೆ ಕೋಲಾಚಾರ್ಯ ನಿರ್ಜರ । ನೆರವಿ ಜೀವಂಗೆಣೆ ಮಹಾತ್ಮನೆ ॥ ಗುರುವರೇಣ್ಯ ॥ ॥

ಅ. ಪ. ॥ ಜಯತು ಅಂಗಿರಸಾಂ ವರನೆ ಜಯ । ಜಯತು ಭರತಾಚಾರ್ಯವರ ಜಯ । ಜಯತು ರಥಯೂಥಪಯೂಥಪಜಯ । ಜಯತು ಕುಂಭಜ ರುಕ್ಮರಥ ಜಯ ॥ ಜಯತು ಭಾರದ್ವಾಜ ಜಯ ಜಯ । ಜಯತು ದ್ರೋಣ ಶೋಣಾಶ್ವನೇ ಜಯ । ಜಯತು ಶಿಖಿವೇಶ್ಯಕನ ಶಿಷ್ಯನೆ । ಜಯತು ಶ್ಯಾಮಲವರ್ಣ ಪಾಲಿಸು ॥ ಗುರುವರೇಣ್ಯ ॥ ೧ ॥ ಮನದಿ ಮಥಿಸುತ್ತಗ್ನಿ ಬಾಣಕೆ । ವನ ಶರದಿ ನಂದಿಸುತ ಮರುತಗೆ । ಘನದ ಪರ್ವತದಿಂದ ಖಂಡಿಸು । ತನಕ ನಗ ವಜ್ರದಲಿ ಹರಿಸಲು ॥ ಇನನಲಗಿನಿಂ ರಜನಿ ನೀಗಿಸಿ ಮಣಿದು ವ್ಯೂಹದ ರಚನೆ ಕಲಿಯುತ । ನೆನೆದು ತಿಳಿದಾ ಶಬ್ದ ಭೇದಿಯ । ದಿನ ದಿನವು ಪಠಿಸುತ್ತ ನುತಿಸುತ ॥ ಗುರುವರೇಣ್ಯ ॥ ೨ ॥

॥ ವಾರ್ಧಿಕ ॥

ಧರಣಿ ಪಾಲಕ ಲಾಲಿಸಿತ್ತ ಕುರು ಪಾಂಡವರು । ಕರಿಪುರದಿ ಭೀಷ್ಮನಿತ್ತಾಣತಿಯೊಳಾ ಕುಂಭ । ತರಳ ಕೃಪರಿಂ ಸಕಲ ವಿದ್ಯೆಯಂ ಕಲಿಯುತ್ತಲಿರುತಿರುವ ಸಮಯದೊಳಗೆ ॥ ತರತರದ ಮೃಗ ಬೇಟೆಯಾಡಿ ಬರುವಾಶೆಯಿಂ । ತೆರಳಿ ಬರುತೊಂದು ದಿನ ದ್ರೋಣನಿಂಗೆರಗುತ್ತ । ಭರಿತ ಉಲ್ಲಾಸದಿಂ ಧರಿಸಿ ನಾನಾಯುಧವ ಶೌರ್ಯದಿಂದಿಂತೆಂದರು ॥ ೧ ॥

॥ ಭೈರವಿ- ಏಕ ॥

ಗುರುವರ ಕೇಳಿಂದಿನದಿ । ಮೃಗ । ನೆರವಿ ಕೊಲ್ವ ಸತ್ವರದಿ ॥ ಧರಿಸಿ ಗದೆಯ ಪಿಡಿದೈದೆ । ನೀ । ನಿರುಕಿಸು ಕಲಿತಿಹ ವಿದ್ಯೆ ॥ ೧ ॥ ನಿತ್ತು ಪೇಳ್ದ ದುಶ್ಶಾಸ । ಈ । ಕತ್ತಿಯೊಳ್ ಕಿಟಿಗಳ ಶ್ವಾಸ ॥ ಕುತ್ತಿ ಕೊಂದು ನಿಲ್ಲಿಪೆನು । ಎನ । ಗಿತ್ತಪುದೊಂದಾಜ್ಞೆಯನು ॥ ೨ ॥ ಮಿಕ್ಕನುಜರು ಪೇಳಿದರು । ಬಲು । ಸೊಕ್ಕಿದ ಮೃಗವಡವಿಯೊಳು ॥ ದಿಕ್ಕುಗೆಟ್ಟು ಓಡುವವು । ಕೊಂ । ದಿಕ್ಕಿ ಬಹೆವು ಇಂದಿನೊಳು ॥ ೩ ॥

॥ ಭೈರವಿ- ಅಷ್ಟ ॥

ಸಹದೇವ ಮಣಿದೆಂದನು । ಕಾಡೊಳು ಹಳ್ಳ । ಗುಹೆಗಳನರಿತು ನಾನು ॥ ಗ್ರಹಿಸಿಯುಪದ್ರಿಪ ಬಹು ಕ್ರೂರಿಗಳ ಕೊಲ್ವೆ । ಗಹನಕೆ ಕಳುಹು ನೀನು ॥ ೧ ॥ ನಕುಲಾಂಕನೆರಗುತೆಂದ । ಗುರುವೆ ಬಾಣ । ನಿಕರ ಪರೀಕ್ಷೆಯೊಂದ ॥ ಪ್ರಕಟಮಾಡಲು ಪೋಪೆ ಸಕಲರ ನೆರವಿಗೆ । ಸುಖಮಾಗೆ ಹರಸಿರೆಂದ ॥ ೨ ॥

॥ ಕೇತಾರಗೌಳ- ಝಂಪೆ ॥

ಮುಂದೆ ಬಂದೆಂದ ನರನು । ವ್ಯಾಘ್ರವಿಹ । ಮಂದೆಗಳ ಹುಡುಕಿ ನಾನು ॥ ನಿಂದೆನ್ನ ಶರಮಳೆಯಲಿ । ತೀರಿಸುವ । ಚಂದ ಪರಿಕಿಸಿ ಜತೆಯಲಿ ॥ ೧ ॥ ನಿಜ ಶಕ್ತಿಯೆಷ್ಟೆಂಬುದ । ಮದವೇರ್ದ । ಗಜಗಳಲಿ ನಾ ತೋರ್ಪುದ ॥ ದ್ವಿಜಗುರುವೆ ಧರ್ಮ ನೋಡಿರಿಂದು । ಶಿಷ್ಯನಾ । ಭುಜಬಲವ ನಿಷ್ಠೆಗೊಂಡು ॥ ೨ ॥

Scanned by CamScanner

ಮೂರುತಿಯೊರೆದನು । ಬೇಟೆ ಸ । ದ್ಧರ್ಮದಿಂ ಮಾಳ್ಪೆ ನಾನು ॥ ನಿಮ್ಮ ಮನ ತೋಷಿಸುವೆನು । ರಕ್ಷಣೆಯ । ನುಂ ಮಾಡದುಳಿಯದಿಹೆನು ॥ ೩ ॥

॥ ಭಾಮಿನಿ ॥

ವೀರ ಕುವರರೆ ನಿಮ್ಮೊಳುತ್ಸಹ । ವೇರಿ ಬೇಟೆಗೆ ಮನವು ತುಂಬಿರೇ ಸಾರತರ ದಸ್ತ್ರಗಳು ಕೈದುಗಳೊಡನೆ ಬಲೆ ಸಹಿತ ॥ ಸೇರಿಸುತ ನಾಯ್ಗಳನು ತೆರಳುವ । ಘೋರ ಕಾಂತಾರಕ್ಕೆನುತ ಪರಿ । ವಾರದೊಡನಾ ದ್ರೋಣ ಪೊರಮಟ್ಟಯ್ದ ಕಾನನಕೆ ॥ ೧ ॥

॥ ಮುಖಾರಿ- ಏಕ ॥

ಬೇಟೆಯನ್ನಾಡಿದರ್ಬಾಲಕರು । ಸುಸ್ಥಳದಿ ಗುರುವ । ನೋಟಕರಾಗಿ ನಿಲಿಸುತ್ತವರು ॥ ಪ ॥ ಈಟಿ ಸಬಳ ಬಿ । ಲ್ಲಾಟದಿಂದ ಬೊ । ಬ್ಬಾಟದಿ ಸುಳಿದು ಮ । ಹಾಟವಿಯೊಳಗೆ ॥ ಬೇಟೆ ॥ ೧ ॥ ಸಂದುಗೊಂದಿನಲಿ । ನಿಂದಿಹ ಮೃಗತತಿ । ಯಂದೆಬ್ಬಿಸುತಲಿ । ಕಂಧರ ಕಡಿದು ॥ ಬೇಟೆ ॥ ೨ ॥ ಗಗನದಿ ಹಾರುವ । ಖಗತಿಂಥಿಣಗಳ । ಮುಗಿಸುತ ಹಲವನು । ಬಗೆಬಗೆಯಿಂದ ॥ ಬೇಟೆ ॥ ॥ ೩ ॥

॥ ಭೈರವಿ- ಏಕ ॥

ಭೀಮನು ಗಜಗಳ ತಂಡ । ಕಂ । ಡಾ ಮಹಬಲದೋರ್ದಂಡ ॥ ಸಾಮಜಗಳ ಮರ್ದಿಸಿದ । ಗುದ್ದಿ । ಭೂಮಿಗೆ ಕೆಡೆವುತ ನಡೆದ ॥ ೧ ॥ ದುರ್ಯೋಧನನುಲ್ಲಸದಿ । ಮಹ । ಕ್ರೌರ್ಯದ ಸಿಂಹವ ಛಲದಿ ॥ ಧೈರ್ಯದಿ ಗುಹೆಯಿಂದೆಳೆದು । ಬಹು । ಶೌರ್ಯದಿ ಕೊಂದನು ಮುಳಿದು ॥ ೨ ॥

॥ ಶಂಕರಾಭರಣ- ಮಟ್ಟೆ ॥

ತೋಷದಿ ವರಾಹಗಳ ದುಶ್ವಾಸ ಕಾಣುತ । ಘಾಸಿ ಮಾಳ್ಪೆನೆಂದು ಪಿಡಿದು ಬೀಸಿ ತಿರುಹುತ ॥ ತಾ ಸುರಗಿಯೊಳಿರಿದು ಕೊಂದು ರಾಶಿ ಮಾಡಲು । ಭೂಸುರೇಂದ್ರ ನೋಡುತ ಸಂತೋಷ ತಾಳಲು ॥ ೧ ॥ ಮಾದ್ರಿ ತರಳರೊಡನೆ ಕೌರವೇಂದ್ರನನುಜರು । ಶುದ್ಧಮೊಲಕುರಂಗ ಕಣೆಯ ಕಿಟಿಯ ಕೊಂದರು ॥ ಮರ್ದಿಸಿದರು ಮಸೆದ ಬಾಣ ಹೊಯಿದು ಮೃಗಗಳ । ಯುದ್ಧ ಕಣದ ರೀತಿಯಾಯ್ತು ಬಿದ್ದು ಹೆಣಗಳ ॥ ೨ ॥

॥ ಭೈರವಿ- ಅಷ್ಟ ॥

ಮತ್ತೆ ಮುಂಬರಿದು ಪಾರ್ಥ । ಕಂಡನು ಮದ । ವೆತ್ತಿರ್ದ ಹುಲಿಯ ಸ್ವಾರ್ಥ ॥ ಇತ್ತ ಬರುವ ಮೊದಲೆತ್ತಿದಸ್ತ್ರದಿ ಶಿರ । ಕತ್ತರಿಸಿದ ನಗುತ ॥ ೧ ॥ ಕಡವೆಯ ಹರಿಣಗಳ । ಪಿಡಿಯಲೆಂದು । ಬಿಡುತಾಗ ಕುನ್ನಿಗಳ ॥ ಹಿಡಿ ಹಿಡಿ ಎನುತಿರೆ ಪಿಡಿದು ವಾಸನೆಯನ್ನು । ನಡೆಯೆ ಮುಂದಡವಿಯಲಿ ॥ ೨ ॥

॥ ಮಾರವಿ- ಏಕ ॥

ವನದಲಿ ಬೊಗಳುವ ಶುನಕಂಗಳ ಧ್ವನಿ । ಯನು ತಿಳಿದಾದೆಸೆಗೆ ॥ ವನಚರ ಸುತನಾ ಶಬ್ದಭೇದಿ ಶರ । ವನು ಬಿಡಲಾ ಕಡೆಗೆ ॥ ೧ ॥ ಬಾಯೊಳು ಮೈಯೊಳು ಸಾಯಕಗಳು ಹೊಗೆ । ನಾಯ್ಗಳು ಗೋಳಿಡುತ ॥ ಆಯಾಸದಿ ಬರಲವುಗಳ ಮನ್ನಿಸಿ । ಗಾಯವ ಮಾಣಿಸುತ ॥ ೨ ॥ ಕಾಡಿನೊಳಗೆ ಮಾಯಾವಿಯಂತೆ ಶರ । ಹೂಡಿ ಶ್ವಾನಗಳನು ॥ ಕೇಡೊದಗಿಸಿದನ ನೋಡುವೆನೆನ್ನುತ । ಕೂಡೆ ನಡೆದ ನರನು ॥ ೩ ॥ ಮೆಲ್ಲನೆ ಕಾಡಿನೊಳೆಲ್ಲ ಹುಡುಕೆ ಮುಂ । ದಲ್ಲಿ ವ್ಯಾಧ ತರಳ ॥ ಬಿಲ್ಲುಬಾಣ ಪಿಡಿದುಲ್ಲಾಸದೊಳಿರೆ । ನೊಲ್ಲಿಸಿದನು ವಿಜಯ ॥ ೪ ॥

॥ ಕೇತಾರಗೌಳ- ಅಷ್ಟ ॥

ಧಿರುರೆ ಯಾರ್ರೈ ವ್ಯಾಧ ತರಳನೆ ನಾವೆಲ್ಲ । ಬರಲು ಬೇಟೆಯನಾಡುತ ॥ ಇರುವ ನಾಯ್ಗಳಿಗೆ ನೀ ಸರಳ ಮಳೆಯ ಬಿಟ್ಟು । ಪರಿಭವಗೊಳಿಸಿದೇಕೆ ॥ ೧ ॥ ವೀರನೆ ಈ ನಿಷಾಧಾರಣ್ಯದೆಡೆಗಯ್ದು । ಕ್ರೂರ ಶ್ವಾನಗಳೆನ್ನುತ ॥ ಭಾರಿ ಬೊಬ್ಬೆಯ ಕೇಳಿ ಕೂರಲಗನು ಬಿಟ್ಟೆ । ಚಾರು ಗುರುವ ದಯದಿ ॥ ೨ ॥ ವನಚರ ನಿನಗೆ ಯಾವನು ಗುರು ನಾವೆಲ್ಲ । ಜನ ಪಾಲಕನ ಜಾತರು ॥ ಧನುರ್ವಿದ್ಯೆಗಳನು ಕುಂಭಜನಿಂದ ಕಲಿತವ । ರ್ಬಿನುಗ ನೀನೇನರಿವೆ ॥ ೩ ॥ ನಾಡಾಡಿಗಳ ಮುಂದೆ ಕಾಡಿನಲ್ವರು ನಾವು । ಜೋಡಿಗರಲ್ಲ ನಿಜ ॥ ಮಾಡಿ ದ್ರೋಣನ ಮೂರ್ತಿ ನೀಡಿದ ಮತಿಯಂತೆ । ಬೇಡಿ ಕಲಿತೆ ವಿದ್ಯೆಯ ॥ ೪ ॥

॥ ಮಧ್ಯಮಾವತಿ- ತ್ರಿವುಡೆ ॥

ಪರಿಕಿಸುತಲರ್ಜುನನು ಮಣ್ಣಲಿ । ವಿರಚಿಸಿಹ ಗುರು ದ್ರೋಣ ಮೂರ್ತಿಯ । ಬೆರಗಿನಿಂ ಕೇಳಿದನು ಇವನಿಂ । ದರಿತೆಯಾ ಶರವಿದ್ಯೆಯ । ಭಲರೆ ಲೇಸು ॥ ೧ ॥ ನಾಯ್ಗಳಿಗೆ ನಾ ಬಿಟ್ಟ ಬಾಣವು । ಶ್ರೇಯಮಾಗಿಹ ಶಬ್ದ ಭೇದಿಯು । ನ್ಯಾಯ ಮೂರುತಿ ಗುರು ಕಲಿಸಿದುದು । ಜೀಯ ಎನ್ನಯ ದೇವಗೆ । ನಮಿಸಿ ಹೋಗು ॥ ೨ ॥

॥ ವಾರ್ಧಿಕ ॥

ಕಂಡು ಗುರುಮೂರ್ತಿಯಂ ತನು ಬೆಮರುತರ್ಜುನಂ । ಬೆಂಡಾಗಿ ಗುರುವರಂ ಕುಳಿತಿರ್ಪುವಲ್ಲಿಗಂ । ದಿಂಡರೋಲ್ ಬರುತವಂ ಬಂದಾಗ ಮಣಿದು ನಿಂದಿರ್ದುಕ್ಕೆ ಮುಗಿದೆಂದನು ॥ ಭಂಡ ಕಾಡಿನ ವ್ಯಾಧನಿಂದೊಬ್ಬ ಮಹಯೋಧ । ಪುಂಡು ನಾಯ್ಗಳಿಗೆ ಶರಬಿಟ್ಟು ನಿಂದಿಹಡದರ । ನಂಡಲೆದು ಕೇಳಿದಡೆ ವಿದ್ಯೆ ದ್ರೋಣನ ಕೂಡೆ ಕಲಿತೆನೆನ್ನುವನಾದಡೆ ॥ ೧ ॥

Scanned by CamScanner

॥ ಭೈರವಿ- ಝಂಪೆ ॥

ಗುರುವರ್ಯ ಕೇಳುವನ । ಚರನು ಶರ ವಿದ್ಯೆಗಳ । ಅರಿತನ್ಯಾವಾಗ ಪೇ । ಳ್ದಿರಿ ಸಕಲ ಬಗೆಯ ॥ ೧ ॥ ಶಬ್ದಭೇದಿಯ ಸಹಿತ । ಕ್ಷುದ್ರ ತಿಳಿದಿಹನು ಮನ । ಶುದ್ಧದಿಂ ಎನಗೊರೆಯ । ದಿದ್ದುದೇಕರುಹಿ ॥ ೨ ॥ ದ್ರೋಣ ನರಗದಕೆಂದ । ಜಾಣ ಶಿಷ್ಯನು ಎನಗೆ । ಹೀನ ಶಬರನನರಿಯೆ । ನೇನೆಂಬೆ ಪಾರ್ಥ ॥ ೩ ॥ ಹಸ್ತಿನಾವತಿಯರಸು । ಪುತ್ರರನು ಬಿಟ್ಟು ನಾ । ಶಸ್ತ್ರವಿದ್ಯೆಯ ಕಲಿಸ । ಲೆತ್ತಗಮಿಸಿಲ್ಲ ॥ ೪ ॥

॥ ಘಂಟಾರವ- ರೂಪಕ ॥

ಕೇಳು ಗುರುವರ । ಕಾನನದ ಚರ । ಮೂಲ ಸ್ಥಳದಲಿ । ಮೃತ್ತಿಕೆಯಲಿ ॥ ಶೀಲಮೂರ್ತಿಯ । ಸ್ಥಾಪಿಸುತ್ತವ । ಕೇಳಿ ವಿದ್ಯೆಯ । ಕಲಿತೆನೆನ್ನುವ ॥ ೧ ॥ ನೋಡಲಲ್ಲಿಗೆ । ನೀವೆ ಬನ್ನಿರಿ । ಕೂಡೆ ವಿಷಯವ । ಕೇಳಿ ತಿಳಿಯಿರಿ ॥ ಗೂಢ ಕಾಣಿಕೆ । ಬೇಡಿಯಾತನ । ಮಾಡಿ ತಪವನ । ಪೇಳಲೆಂತು ನಾ ॥ ೨ ॥

॥ ಭಾಮಿನಿ ॥

ಚಿಣ್ಣ ಫಲುಗುಣ ಕೇಳು ಮತ್ಸರ । ವೆಣ್ಣದಿರು ನಾ ನೋಡಿ ಸಕಲವ । ನಿರ್ಣಯಿಪೆ ವನಚರನ ಬಿಡದಿಯ ತೋರು ಬಾರೆನುತ ॥ ಖಿನ್ನಗೊಂಡಿಹ ನರನ ತಳ್ಳಿಸಿ । ಗಣ್ಯ ವ್ಯಾಧನ ಮನೆಯ ಮುಂಗಡೆ । ಯನ್ನು ಸೇರಲು ಏಕಲವ್ಯನು ನೋಡಿ ಪ್ರಾರ್ಥಿಸಿದ ॥ ೧ ॥

॥ ಬೇಹಾಗ್- ಏಕ ॥

ವಿದ್ಯೆಯ ಗುರುವರ ನಮೋ ನಮೋ । ಗುಣ । ಬುದ್ಧಿಪ್ರದಾಯಕ ನಮೋ ನಮೋ ॥ ಉದ್ಧತ ಧೀರ ಸಮುದ್ರ ತೇಜ ಬುಧ । ರುದ್ಧಾರಕ ಕರುಣಾಬ್ಧಿ ನಮೋ ॥ ೧ ॥ ನವರತ್ನಗಳೊಳು ಮಾಣಿಕ್ಯ । ಮೆರೆ । ಯುವುದಂದದಿ ಜಗತಿಗೆ ಮುಖ್ಯ ॥ ಭವನಕೆ ಗುರುವಾಗಿರುವೆಯ ಈ ಗಹ । ನವ ಹೊಕ್ಕುದು ಎನಗತಿ ಚೋದ್ಯ ॥ ೨ ॥ ಸುತ್ತಲಿಹರು ನೃಪ ಬಾಲಕರು । ಗುರು । ವಿತ್ತ ಬಂದೆಯೇಕದನುಸುರು ॥ ಮೂರ್ತಿಯೆ ಚೇತನವೆತ್ತಯ್ದಂದದಿ । ಭಕ್ತ ಶಿಷ್ಯಗೊಲಿದೆಯ ಪೇಳು ॥ ೩ ॥

॥ ಕಂದ ॥

ಕುರುಪಾಂಡುಜರಿವನಾಟವ । ನಿರುಕಿಸಿ ಗುರುವರ ನಿಷಾಧರೇನ್ ಗೈಯು ವರೆಂ ॥ ದಿರಲಾ ವೇಳ್ಯಕೆ ಶಬರಂ । ಎರಗುತ ಪೂಜಿಸಲು ದ್ರೋಣನವಗಿಂತೆಂದಂ ॥ ೧ ॥

॥ ಮಧ್ಯಮಾವತಿ- ಏಕ ॥

ಓಹೋಹೋ ಈಗ ನಾ ತಿಳಿದೆ ನೀ ಹಿಂದೆ । ಆ ಹಸ್ತಿನಾವತಿಗಯ್ದೆನ್ನ ಮುಂದೆ ॥ ವ್ಯೂಹಾದಿ ಶರವಿದ್ಯೆಗಳನು ಕಲಿಯಲು । ಸ್ನೇಹ ಮಾತಾಡಿ ಯಾಚಿಸಿದೆ

ನೀ ಮೊದಲು ॥ ೧ ॥ ಜರೆದಟ್ಟಿದಾ ಮೇಲೆ ಬಂದು ಈ ವನದಿ । ಅರಿತೆ ವಿದ್ಯೆಯನು ಯಾರಿಂದ ಸದ್ವಿಧದಿ ॥ ಅರಗುವರರ ನಾಯ್ಗಳಿಂಗೆ ಬಾಣವನು । ಸುರಿದೆ ನಿನ್ನಯ ತಪ್ಪು ತಿಳಿಯೊ ರೀತಿಯನು ॥ ೨ ॥ ಮಾಡಿದ ತಪ್ಪೊಪ್ಪಿ ಆಡುಮಾತು ಗಳ । ಕೇಡು ತಪ್ಪದು ರಾಜಕುವರರಿಂ ತರಳ ॥ ರೂಢಿಯೊಳ್ ದುಷ್ಕೀರ್ತಿ ತಪ್ಪದು ನಿನಗೆ । ಮೂಢನಾಗದೆ ಮಾರುತ್ತರ ನೀಡು ಎನಗೆ ॥ ೩ ॥

॥ ಕಾಂಬೋದಿ- ತ್ರಿವುಡೆ ॥

ಗುರುವಾಕ್ಯ ಮುತ್ತೆಂಬುದು । ಹಿರಿಯರ ಮಾತು । ಖರೆಯೆಂಬುದರಿವಾದುದು ॥ ನೀವ್ ಮೊದಲೆನ್ನ । ಹರಸುತ್ತ ಕಳುಹಿದುದು । ಪ್ರಸಾದವಾದುದು ॥ ಪರಿಕಿಸಿದೊ ಮೃಣ್ಮಯದಿ ನಿಮ್ಮಯ । ಸರಿ ಸಮಾನದಿ ರಚಿಸಿ ಮೂರ್ತಿಯ । ನಿರದೆ ಪೂಜಿಸಿ ವಿದ್ಯೆಯಾಚಿಸಿ । ಭರಿತನಾದೆ ಮಹಾತ್ಮ ಗುಣನಿಧೆ ॥ ೧ ॥ ಶಬ್ದಭೇದಿಯ ಕಲಿತು । ನಾನಿರೆ ಕಾಡೊಳ್ । ಗದ್ದಲ ಕೇಳ್ದನಿತು । ಶ್ವಾನಗಳನ್ನು । ಮರ್ದಿಪೆನೆಂದರಿತು । ಶರವೆಸೆದೆ ಮಲೆತು ॥ ಶುದ್ಧ ಶಿಷ್ಯರ ಹೊದ್ದಿರುವ ಬಲ । ನಿರ್ಧರಿಸದೆಯೆ ಗೈದ ತಪ್ಪಿಗೆ । ಬಿದ್ದು ನಾ ಪದಪದ್ಮದಲಿ ಮುದ । ಬೇಡ್ವಪೆನು ಉದ್ಧರಿಸು ಎನ್ನನು ॥ ೨ ॥

॥ ಕಂದ ॥

ನಿನ್ನಣುಗನು ಎಂದೆಣ್ಣಿಸಿ । ಎನ್ನಿಂದೇನಾಗಬೇಕು ಪೇಳಿದಡದರಂ ॥ ನಿರ್ಣಯ ನಡೆಸುವೆನೆನೆ ಗುರು । ತನ್ಮಯನಾಗಿರೆ ಭಿಭತ್ಸು ದ್ರೋಣನೊಳೆಂದಂ ॥ ೧ ॥

॥ ಜಂಜೂಟಿ- ರೂಪಕ ॥

ಕಲಶಜಾತ ಗುರುವರೇಣ್ಯಕಳವಿನಿಂದಲೀತನು । ಹಳುವದಲ್ಲಿ ನಿಮ್ಮ ಪ್ರತಿಮೆ ನೆಲೆಯ ಗೈದೀ ಶಬರನು ॥ ಕಲಿತುದೂ ತಪ್ಪಲ್ಲವೇ ನಮ್ಮೊಳಗೆ ತಿಳಿಸದಿರ್ದುದು । ಕುಲವಿಹೀನಗೇಕೀ ವಿದ್ಯೆ ಸುಲಭದಿ ಕೈಸೇರ್ದುದು ॥ ೧ ॥ ಮುಂದೆ ಶಬರ ವೃಂದ ಕೂಡಿ ಬಂದೆಮ್ಮೊಡನೆ ಕಲಹದಿಂ । ಕೊಂದು ಗಜಪುರವನು ಆಳುವಂದವೇನೊ ಶಸ್ತ್ರದಿ ॥ ಹಂದಿ ಮೊಲ ಕುರಂಗ ತಿಂಬ ಮಂದಮತಿಯ ರೀತಿಯೆ । ಚಂದ್ರಕುಲದ ಕೀರ್ತಿಗೆಡರು ಬಂದಪುದಿದು ನೀತಿಯೆ ॥ ೨ ॥

॥ ವಾರ್ಧಿಕ್ಯ ॥

ಗುರುವೆ ನಿಮ್ಮಯ ಮೂರ್ತಿ ರಚಿಸಿ ಕಲಿತಪರಾಧ । ವರಿತು ಮುಂದ್ಯಾರೊಡನೆ ಧುರ ಮಾಡದಂದದಿಂ । ಕರುಣವನ್ನಿರಿಸುತ್ತ ಬೇಡಿ ಗುರುದಕ್ಷಿಣೆಯನೆನಲು ಕುಂಭಜ ಪಾರ್ಥಗೆ ॥ ಬಿರುಸಿನಿಂ ನೋಡುತ್ತ ಖಾತಿಯಂ ನಟಿಸುತ್ತ । ಲೊರೆದ ನಿನಗೇಕೀ ವಿಚಾರ ನಾ ತೋರ್ದಂತೆ ॥ ವಿರಚಿಸುವೆ ತೊಲಗಾಚೆಗೆಂದೇಕಲವ್ಯನನು ಕರೆದೆಂದ ಮೈದಡವುತ ॥ ೧ ॥

Scanned by CamScanner

॥ ಸಾರಂಗ- ಅಷ್ಟ ॥

ಚಾರಿತ್ತ ಏಕಲವ್ಯ । ಶಿಷ್ಯರಲಿ ಪ್ರ । ವೀರ ನೀ ತಿಳಿದೆ ಶೌರ್ಯ ॥ ಭಾರಿ ಭಕ್ತಿಯೊಳೆನ್ನ ಮೂರುತಿಯನು ಮಾಡಿ । ಸಾರತರಾಸ್ತ್ರ ವಿಚಾರವರಿತುಕೊಂಡೆ ॥ ೧ ॥ ಅದಕೆ ಪೇಳುವೆ ನಿನ್ನಲಿ । ಗುರುದಕ್ಷಿಣೆ । ಮುದದಿ ಪಾಲಿಸು ಎನ್ನಲಿ ॥ ಚದುರನೆ ಮುಂದಕಭ್ಯುದಯಮಪ್ಪುದು ಎನ್ನು । ವುದ ಕೇಳಿ ಎರಗುತ ಪದತಳದಲಿ ಪೇಳ್ದ ॥ ೨ ॥

॥ ಕಂದ ॥

ಬಡ ಶಿಷ್ಯನ ಮೇಲ್ ಸಂಶಯ । ಪಡದಿರು ನಿಮ್ಮಾಣೆಯಾಗಿ ನೀವ್ ಬಯಸಿದುದಂ ॥ ಕೊಡುವೆನು ಪೇಳಿರಿ ಎನಲುಂ । ದೃಢದಿಂ ಮೆಚ್ಚುತಲಿ ದ್ರೋಣ ಶಬರನೊಳೆಂದಂ ॥ ೧ ॥

॥ ನವರೋಜು- ಏಕ ॥

ಮುದವನು ತಾಳ್ದೆನು ಶಿಷ್ಯ । ಕೇ । ಳ್ವುದು ಎನಗಿಂದು ಅವಶ್ಯ ॥ ಬದಲೇನಿಲ್ಲವು ಬಲಗೈ ಹೆಬ್ಬೆರ । ಳೆದೆಗುಂದದೆ ಇಡು ಪದ ಸರಸಿಜದಲಿ ॥ ೧ ॥ ಯೋಚನೆ ಮಾಡದೆ ತಡವೆ । ನೀವ್ । ಯಾಚಿಸಿದುದನ್ನೀವೆ ॥ ನೀಚನಲ್ಲ ನಾನೆಂದು ತುಂಡರಿಸುತ । ಲಾಚಾರ್ಯನ ಪದತಳದೊಳಗಿರಿಸಿದ ॥ ೨ ॥

॥ ಸೌರಾಷ್ಟ್ರ- ತ್ರಿವುಡೆ ॥

ಮೆಚ್ಚಿ ಕುಂಭಜನೆಂದ ಬಾಲನೆ । ಹೆಚ್ಚು ಕೀರ್ತಿಯ ತಾಳು ಲೋಕದಿ । ಅಚ್ಚಳಿಯದೀ ಚರಿತೆಯುಳಿಯಲಿ । ನಿಚ್ಚಟದಲಿ ॥ ೧ ॥ ರುಧಿರ ಧಾರೆಯ ಮಂತ್ರಬಲದಿಂ । ಪದುಳದಿಂ ಶಮಿಸುತ್ತ ಹರಸುತ । ವಿಧುಕುಲಜರನು ಕರಕೊಳುತ ನಿಜ । ಸದನ ಸೇರೆ ॥ ೨ ॥

॥ ಭೈರವಿ- ಝಂಪೆ ॥

ಏಕಲವ್ಯನು ಬಳಿಕ । ಲಾ ಕಾಡಿನಲಿ ಬೆಳೆದು । ನೂಕಿ ಬಲು ವತ್ಸರವ । ಸಾಕಾರಮಾದ ॥ ೧ ॥ ರೂಪಯುತೆ ಕಾಮಿನಿಯ । ತಾ ಪ್ರೀತಿಯಲಿ ವರಿಸಿ । ಶ್ರೀಪತಿಯ ಒಲುಮೆಯಿಂ । ದಾ ಪುಣ್ಯವತಿಯು ॥ ೨ ॥ ಕೇತುಮಾನ್ ಎಂಬ ಸಂ । ಜಾತನಂ ಪಡೆದಿರಲು । ಜಾತಿಧರ್ಮದಿ ಸಲಹೆ । ಪ್ರೀತಿಯಿಂ ನಿರತ ॥ ೩ ॥ ಏಕಲವ್ಯನು ಮುಂದೆ । ಶ್ರೀಕಾಂತನನು ಸೇರ್ವ । ಡಾ ಕುತೂಹಲದಿಂದ । ಏಕಾಂತದೊಳಗೆ ॥ ೪ ॥ ಧ್ಯಾನದಿಂದಿರಲು ಗೀ । ರ್ವಾಣರಭ್ರದಿ ನಿಂದು । ಕ್ಷೋಣಿಗೆ ಸುವೃಷ್ಟಿಯನು । ಕಾಣಿಸಿದರಾಗ ॥ ೫ ॥ ಇಳೆಯೊಳಗೆ ಮಂಗಲವು । ಮೊಳೆದೋರೆ ವನಚರರ । ಲಲನೆಯವರಾರತಿಯ । ಬೆಳಗಿದರು ನಲಿದು ॥ ೬ ॥

॥ ಧವಳಾರ- ಏಕ ॥

ಅಂಬುಜಮುಖಿಯರು ತುಂಬು ಜವ್ವನೆಯರು । ಬಿಂಬಾಧರೆಯರು ಸಂಭ್ರಮದಿಂದ ॥ ಸಂಭ್ರಮವಾಂತಿಹ ಕುಂಭ ಕುಚೆಯರತಿ । ಮುಂಬರಿವುತ ಸೌರಂಭದೊಳಾಗಲೆ । ಪೊಂಬರಿವಾಣದ ಫಲಸುಮದಿಂದಿರು । ವಾರತಿಯ ಬೆಳಗಿರೆ ॥ ಶೋಭಾನಂ ॥ ೧ ॥

॥ ಮೋಹನ- ಏಕ ॥

ಕಮಲಾಕ್ಷಗೆ ಸುಮಶರಪಿತಗೆ । ದ್ಯುಮಣಿ ತೇಜ ರಮೆಯರಸನಿಗೆ ॥ ವಿಮಲಮೂರ್ತಿಯಮಿಗಳ ವಂದಿತನಿಗೆ । ಕ್ಷಮೆಯ ಜನರ ಕರುಣಾನಿಧಿಗೆ ॥ ಮಂಗಲಂ ॥ ೧ ॥

॥ ವಾರ್ಧಿಕ ॥

ಜನಮೇಜಯಂಗೊರೆದ ಭಾರತಾಮೃತದೊಳಗೆ । ಗುಣವಂತ ಏಕಲವ್ಯಕನ ಗುರುಭಕ್ತಿಯಂ । ಮನಕೆ ತೋರ್ದಂತೆಕ್ಷಗಾನದಿಂ ವಿರಚಿಸಿದೆ ಛಂದಸ್ಸುಗಳನರಿಯದೆ ॥ ಜನ ಶರಣ ಬಲಿಪ ನಾರಾಯಣಂ ಭಾಗವತ । ನೆನಿಪವನ ಕೃತಿಯಿದರನೋದಿ ಪೇಳ್ವವರಿಂಗೆ । ಕಣಪುರದ ಗೋಪಾಲಕೃಷ್ಣನನುಗಾಲ ಪಾಲಿಸಲೆಂದು ಪ್ರಾರ್ಥಿಸುವೆನು ॥ ೧ ॥

ಜುಮ್ಲಾ ಪದ ಸಂಖ್ಯೆ- ೧೦೫

-ಮಂಗಲ-

Scanned by CamScanner